
ಎಐ ಚಿತ್ರ

ಅಫ್ಘಾನಿಸ್ತಾನದ ಬಲ್ಖ್ ಪ್ರಾಂತ್ಯದಲ್ಲಿ ಹುಟ್ಟಿದ ರಬಿಯಾ 'ಬಲ್ಖ್‌ನಲ್ಲಿ ವಸಂತ' ಪುಸ್ತಕವನ್ನು ಬರೆದಿದ್ದಾಳೆ ಎಂದು ಹೇಳಲಾಗುತ್ತದೆಯಾದರೂ, ಅವಳದೆಂದು ಉಳಿದಿರುವುದು ಕೆಲವು ಸಾಲುಗಳ ಒಂದೇ ಪದ್ಯ. ನಮಗೆ ಉಳಿದಿರುವುದು ಆಕೆಯ ದುರಂತ ಜೀವನ ಮತ್ತು ನೋವಿನ ಬಿಕ್ಕಳಿಕೆಯಂತೆ ಉಳಿದಿರುವ ಒಂದೆರಡು ಸಾಲುಗಳು ಮಾತ್ರವಾದರೂ ಆಕೆಯನ್ನು ಕುರಿತು ನಂತರ ಬಂದ ದೊಡ್ಡ ದೊಡ್ಡ ಕವಿಗಳು ಮಸ್ನವಿಗಳನ್ನೇ ಬರೆದಿದ್ದಾರೆ. ಮೊಹಮ್ಮದ್ ಆವ್ ಫಿ (1171-1242) ತನ್ನ 'ತತ್ವಗಳ ರಸತತ್ವ' (ಲುಬಾಬ್ ಅಲ್ ಅಲ್ಬಾಬ್) ಎಂಬ ಪ್ರಾಚೀನ ಪರ್ಶಿಯನ್ ಕವಿಗಳ ಕವಿ-ಕಾವ್ಯ ವೃತ್ತಾಂತದ ಕೃತಿಯಲ್ಲಿ ಈಕೆಯ ಕಾವ್ಯದ ಸೂಕ್ಷ್ಮತೆ ಹಾಗೂ ಭಾವಕುಶಲತೆಗಳನ್ನು ಉಲ್ಲೇಖಿಸುತ್ತಾನೆ. ಫರೀದ್ ಅಲ್ ಅತ್ತರ್ (1145-1221) ಎಂಬ ಪ್ರಸಿದ್ಧ ಕವಿ ತನ್ನ 'ಇಲಾಹಿ ನಾಮಾ' (ದೈವಿಕ ಕೃತಿ) ಎಂಬ ದೀರ್ಘ ಕವಿತೆಯಲ್ಲಿ ಆಕೆಯ ಪ್ರೇಮವನ್ನು ದೈವಿಕ ಅನುಭೂತಿಯೆಂದೂ, ಆಕೆ ಸಾಮಾನ್ಯ ಗುಲಾಮನನ್ನು ಪ್ರೀತಿಸಿದ್ದು ದೈವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಬಗೆಯಾಗಿತ್ತು ಎಂದು ಬಣ್ಣಿಸುತ್ತಾನೆ. ಜಾಮಿ ಎಂಬ 15ನೇ ಶತಮಾನದ ಕವಿಯೂ ರಾಬಿಯಾಳ ಕಾವ್ಯದ ಮಹತ್ವವನ್ನು ಕೊಂಡಾಡುತ್ತಾನೆ. ನಂತರ 19ನೇ ಶತಮಾನದ ರೆಜಾ